ಇಂದು ದಿನಾಂಕಃ 22.01.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ವಿ ವಿ ಎಂ ವಕೀಲರಿಂದಃ

1. ಪ್ರತಿವಾದಿ 4 ಮತ್ತು 5 ರವರು ನನ್ನ ಸಹೋದರರು ಎಂದರೆ ಸರಿ. 1 ನೇ ಪ್ರತಿವಾದಿಯು ನನ್ನ ತಂದೆ ಎಂದರೆ ಸರಿ. 2 ನೇ ಪ್ರತಿವಾದಿ ನನಗೆ ಚಿಕ್ಕಪ್ಪ ಆಗಬೇಕು. 3 ನೇ ಪ್ರತಿವಾದಿ ನನ್ನ ದೊಡ್ಡಪ್ಪನ ಮಗ. 7 ನೇ ಪ್ರತಿವಾದಿಯು ಸಹ ನನ್ನ ಚಿಕ್ಕಪ್ಪನ ಮಗ.

2. 1 ನೇ ವಾದಿ ಮತ್ತು 2 ನೇ ವಾದಿಯ ತಂದೆ ಇಬ್ಬರು ಸೇರಿಕೊಂಡು ನನ ತಂದೆ ಆತನ ಸಹೋದರರ ಮೇಲೆ ಹಿಸ್ಸಾ ದಾವೆಯನ್ನು ಅಸಲು ದಾವಾ ನಂ. 53/2001 ರಂತೆ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನ್ಯಾಯಾಲಯವು ಹಿಸ್ಸೆಯನ್ನು ನೀಡಿ ತೀರ್ಪನ್ನು ನೀಡಿರುತ್ತದೆ ಎಂದರೆ ಸರಿಯಲ್ಲ. ಸದರಿ ತೀರ್ಪು ಮತ್ತು ಡಿಕ್ರಿಯ ಆದಾರದ ಮೇಲೆ ಎಫ್ ಡಿ ಪಿ 33/2004 ರಂತೆ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ಎಫ್ ಡಿ ಪಿ ಪ್ರಕರಣದಲ್ಲಿ ನನ್ನ ತಂದೆ 1 ನೇ ಪ್ರತಿವಾದಿಯು 2 ನೇ ಎದುರುದಾರರು ಇದ್ದರು, 2 ನೇ ಪ್ರತಿವಾದಿಯು 3 ನೇ ಎದುರುದಾರರು ಇದ್ದರು ಮತ್ತು 3 ನೇ ಪ್ರತಿವಾದಿ 1 ನೇ ಎದುರುದಾರರು ಇದ್ದರು ಎಂದರೆ ಸರಿಯಲ್ಲ. ಸದರಿ ಎಫ್ ಡಿ ಪಿ ಪ್ರಕರಣದಲ್ಲಿ ಸದರಿ ಎದುರುದಾರರು ಗೈರು ಹಾಜರು ಇದ್ದು, ಯಾವುದೇ ತಕರಾರುಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ರಸೂಲ್ ಸಾಬ್ ತಂದೆ ವಾಸಲ್ ಸಾಬ ಹರಿಹರ ಇವರು ಗೈರು ಹಾಜರು ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ ಹಾಗೂ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ಶರೀಫಾ ಬಿ, ಜೈರುಸಾಬ್ ಹರಿಹರ, ಜೀಜನ ಬಿ ಹರಿಹರ ಇವರು ಕೂಡಾ ಸದರಿ ಎಫ್ ಡಿ ಪಿ ಪ್ರಕರಣದಲ್ಲಿ ಏಕ ತರ್ಫಿಯಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಯಾವುದೇ ನೋಟಿಸ್ ಜಾರಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿಯವರಿಗೆ ನೋಟಿಸ್ ಜಾರಿಯಾಗಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸದರಿ ಎಫ್ ಡಿ ಪಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಕಮೀಷನವರರನ್ನು ನೇಮಕ ಮಾಡಿ ಪ್ಲಿರಿಮರಿ ಡಿಕ್ರಿಯ ಆದೇಶದಂತೆ ಆಸ್ತಿಗಳನ್ನು ವಿಂಗಡಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಎಫ್ ಡಿ ಪಿ ಪ್ರಕರಣದಲ್ಲಿ ದಾವಾ ಎ ಆಸ್ತಿಯ ಒಟ್ಟು 3 ಎಕರೆ 5 ಗುಂಟೆ ಕ್ಷೇತ್ರದಲ್ಲಿ 1 ಎಕರೆ 25 ಗುಂಟೆ ಜಮೀನನ್ನು 2 ನೇ ವಾದಿಯ ತಂದೆ ಗೂಡುಸಾಬ್ ಹರಿಹರ

ಇವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಷೆಡ್ಯೂಲ್ ಬಿ ಆಸ್ತಿಯನ್ನು 1 ನೇ ವಾದಿಯ ಹಿಸ್ಸೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

4. ಸದರಿ ಎಫ್ ಡಿ ಪಿ ಪ್ರಕರಣದಲ್ಲಿ ಆದಂತಹ ಅಂತಿಮ ಡಿಕ್ರಿಯ ಆದಾರದ ಮೇಲೆ ಅಮಲ್ ಜಾರಿ ನಂ. 3/2012 ರಲ್ಲಿ ವಾದಿಯರು ತಮಗೆ ಬಂದಂತಹ ದಾವಾ ಆಸ್ತಿಗಳನ್ನು ಕಬ್ಜಾ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರು ಸದರಿ ಅಮಲ್ ಜಾರಿ ಪ್ರಕರಣದಲ್ಲಿ ದಾವಾ ಆಸ್ತಿಗಳನ್ನು ಕಬ್ಜಾ ಪಡೆಯುವಾಗ ನಾನು ಕೂಡಾ ಹಾಜರು ಇದ್ದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದಂತೆ ವಾದಿಯರು ದಾವಾ ಆಸ್ತಿಗಳನ್ನು ಕಬ್ಜಾ ಇಟ್ಟುಕೊಂಡು ಬೆಳೆಗಳನ್ನು ಬೆಳೆದು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

5. ವಾದಿಯರು ತಮಗೆ ಬಂದ ಹಿಸ್ಸಾದ ದಾವಾ ಆಸ್ತಿಗಳನ್ನು ವ್ಯವಸಾಯ ಮಾಡುವಾಗ ದಿಃ 13-06-2015 ರಂದು ಪ್ರತಿವಾದಿಗಳು ಎಲ್ಲರೂ ಹರಕತ್ ಮಾಡಿ ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ತೊಂದರೆ ನೀಡಿದಕ್ಕೆ ಸಂಬಂಧಿಸಿದಂತೆ ವಾದಿಯರು ಪೋಲಿಸ್ ಠಾಣೆಯಲ್ಲಿ ಪಿರ್ಯಾದನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ಪೋಲಿಸರು ನನ್ನ ಮತ್ತು ಉಳಿದ ಪ್ರತಿವಾಯರನ್ನು ಪೋಲಿಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ.

6. ನನಗೆ ನವೀದ್ ಬಸೀರ್ ಸಾಬ್ ಪಟ್ಟಣಶೆಟ್ಟಿ ಅವರ ಪರಿಚಯವಿರುತ್ತದೆ. ರವಿಕುಮಾರ ಶಿವಾನಂದಪ್ಪ ಚೌಟಿ ಅವರು ನನಗೆ ಪರಿಚಯವಿರುವುದಿಲ್ಲ. ಅದೇ ರೀತಿ ಮಲ್ಲೇಶಪ್ಪ ಪ್ಯಾಟಿರವರು ನನಗೆ ಪರಿಚಯವಿರುತ್ತಾರೆ. ನೀಯಾಜ್ ಅಂಜಿ ಅವರು ಪರಿಚಯವಿರುವುದಿಲ್ಲ. ಅದೇ ರೀತಿ ಶಿವಕುಮಾರ ಬೋವಿ ಅವರು ಕೂಡ ಪರಿಚಯವಿರುವುದಿಲ್ಲ. ಸದರಿಯವರೆಲ್ಲ ನಮ್ಮ ಊರಿಗೆ ಸೇರಿದ ವ್ಯಕ್ತಿಗಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರ ಹೆಚ್ಚಿನ ಪರಿಚಯವಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವ್ಯಕ್ತಿಗಳು ಊರಿನಲ್ಲಿ ಒಳ್ಳೆಯ ಹೆಸರು ಮತ್ತು ಚಾರಿತ್ರ್ಯ ಉಳ್ಳಂತ ವ್ಯಕ್ತಿಗಳು ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಸದರಿಯವರ ಹಾಜರಾತಿಯಲ್ಲಿ ಮಾನ್ಯ ನ್ಯಾಯಾಲಯದ ಬೇಲಿಫ್ ರವರು ವಾದಿಗಳಿಗೆ ದಾವಾ ಆಸ್ತಿಗಳ ಕಬ್ಜಾ ವನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

7. ಸದರಿ ಎಫ್ ಡಿ ಪಿ ಪ್ರಕರಣ ಮತ್ತು ಅಮಲ್ ಜಾರಿ ಪ್ರಕರಣದ ಮೇಲೆ ನಾನು ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ವಾದಿಯರು ನ್ಯಾಯಾಲಯದ ಆದೇಶದ ಮೇರೆಗೆ ದಾವಾ ಆಸ್ತಿಗಳನ್ನು ಕಬ್ಜಾಕ್ಕೆ ಪಡೆದುಕೊಂಡಿದ್ದರು ಸಹ ಅವರು ದಾವಾ ಆಸ್ತಿಗಳ ಸ್ವಾದೀನದಲ್ಲಿ ಇಲ್ಲ ಎಂದು

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ದಾವಾ ಷಡ್ಯೂಲ್ ಸ್ವತ್ತುಗಳ ಸ್ವಾಧೀನಕ್ಕೆ ಅನಧೀಕೃತವಾಗಿ ಮತ್ತು ಕಾನೂನು ಬಾಹಿರವಾಗಿ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-xx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಹಿರೇಕೆರೂರು.